ಅಥವಾ ಬಿಳಿ ಪಟ್ಟೆಗಳನ್ನು ಹಾಕಿ ವಾಹನ ಚಾಲನೆಗೆ ಅನುಕೂಲ ಕಲ್ಪಿಸಿ ಅಪಘಾತ ತಪ್ಪಿಸುವ ಬಗ್ಗೆ ಅವಶ್ಯಕ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಅಧ್ಯಕ್ಷರು.—ಸ್ಕೂಟರ್ ಮತ್ತು ಮೋಟಾರ್ ಸೈಕಲ್ ಅಪಘಾತ ಹೆಚ್ಚಿಗೆ ಆಗುತ್ತಿದೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಈಗಾಗಲೇ, ನಾಲ್ಕು ಇಲಾಖೆಯ ಮುಖ್ಯಾಧಿಕಾರಿಗಳನ್ನು ಕರೆದು ಚರ್ಚೆ ಮಾಡಿದ್ದೇವೆ. ಬಹುಶಃ ಆ ದಿಕ್ಕಿನಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

(೨) ಬೃಂದಾವನ ಅಲಾಯ್ಸ್ ಕಾರ್ಖಾನೆಯಲ್ಲಿ ೨೪ ಕಾರ್ಮಿಕರನ್ನು ತೆಗೆದು ಹಾಕಿರುವುದು.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೆ, ಬೃಂದಾವನದ ಅಲಾಯ್ಸ್, ಪೀಣ್ಯ, ಬೆಂಗಳೂರು—ಇಲ್ಲಿ ಕೆಲಸ ಮಾಡುವ ೨೪ ಕಾರ್ಮಿಕರನ್ನು ಅನ್ಯಾಯವಾಗಿ ಕೆಲಸದಿಂದ ವಜಾ ಮಾಡಿ ಅದರ ಬಗ್ಗೆ ಯಾವ ರೀತಿಯ ಕಾನೂನು ಬದ್ಧವಾದ ಕ್ರಮವನ್ನೂ ತೆಗೆದುಕೊಳ್ಳದೆ ಅವರನ್ನು ಕೆಲಸವಿಲ್ಲದೆ ಹಾಗೂ ಅವರ ಸಂಬಳವೂ ಇಲ್ಲದೆ ಅವರು ಹಾಗೂ ಅವರ ಸಣ್ಣ ಕುಟುಂಬಗಳನ್ನು ಉಪವಾಸ ಹಾಕುವಂತಾಗಿದೆ. ಅವರುಗಳ ಪೈಕಿ ಶ್ರೀ ಪುಟ್ಟಸಿದ್ದಯ್ಯ ಎಂಬ ಒಬ್ಬರನ್ನು ಮಾತ್ರ ಕನ್ಸಿಲಿಯೇಷನ್ ವಿಚಾರಣೆಯಲ್ಲಿ ವಿಚಾರಣೆ ನಡೆಸಿ ಈಗ ಆತನನ್ನು ಮಾತ್ರ ಕೋರ್ಟಿಗೆ ಕಳಿಸಿದ್ದು ಆ ಪ್ರಕರಣವು ಕೋರ್ಟಿನಲ್ಲಿ ವಿಚಾರಣೆಯ ಹಂತದಲ್ಲಿರುತ್ತದೆ. ಉಳಿಕೆ ೨೩ ಕಾರ್ಮಿಕರನ್ನು ಯಾವ ವಿಚಾರಣೆಯೂ ಇಲ್ಲದೆ ಈ ಮೂರು ವರ್ಷಗಳಿಂದ ಕೆಲಸವನ್ನು ಕೊಡದೆ ತೊಂದರೆಪಡಿಸಿರುತ್ತಾರೆ. ಹೀಗೆ ಮಾಡಿರುವುದು ಕಾನೂನಿಗೆ ವಿರುದ್ಧವಾಗಿದ್ದು ಆ ೨೩ ಜನರನ್ನು ಸಹ ಲೇಬರ್ ಕಮಿಷನರ್‌ರವರು ಕನ್ಸಿಲಿಯೇಷನ್ ಪಂಚಾಯಿತಿ ನಡೆಸಿ ಅವರುಗಳ ಪ್ರಕರಣಗಳನ್ನು ಕೋರ್ಟಿಗೆ ಕಳುಹಿಸಿದೆ ಅನ್ಯಾಯ ಮಾಡಿರುತ್ತಾರೆ. ಈ ೨೩ ಜನರ ಹೆಸರನ್ನು ದುರುದ್ದೇಶಪೂರ್ವಕವಾಗಿಯೋ ಅಥವಾ ಇತರ ಪಿತೂರಿಯಿಂದಲೋ ಕೋರ್ಟಿಗೆ ದಾಖಲು ಮಾಡದೆ ಅವರಿಗೆಲ್ಲಾ ತುಂಬಾ ಅನ್ಯಾಯವಾಗಿರುತ್ತದೆ. ಆದ್ದರಿಂದ ಸರ್ಕಾರವು ಈ ಕೂಡಲೇ ೨೩ ಕಾರ್ಮಿಕರ ಪ್ರಕರಣವನ್ನು ಕೋರ್ಟಿಗೆ ದಾಖಲುಪಡಿಸುವಂತೆ ಆದೇಶ ನೀಡಬೇಕೆಂದು ಕೋರುತ್ತೇನೆ.

ಶ್ರೀ ಡಿ ಮಂಜುನಾಥ್ (ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ ಮೂರು ವರ್ಷದ ಕೆಳಗೆ ೨೪ ಜನರನ್ನು ತೆಗೆದಿಹ್ದಾರೆ. ಅವರಲ್ಲಿ ಒಬ್ಬರದು ಮಾತ್ರ ಲೇಬರ್ ಕೋರ್ಟಿಗೆ ರೆಫರ್ ಮಾಡಿದ್ದಾರೆ. ೨೩ ಜನಗದ್ದು ದುರುದ್ದೇಶದಿಂದ ಮಾಡಿಲ್ಲ ಎಂದು ಹೇಳಿದ್ದಾರೆ. ಕಾಗದ ಪತ್ರಗಳನ್ನು ತರಿಸಿ ನೋಡಿ ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

೩) ಹಾನಗಲ್ ತಾಲ್ಲೂಕಿನಲ್ಲಿ ಬೋರ್‌ವೆಲ್‌ಗಳಿಗೆ ವಿದ್ಯುತ್ ಸರಬರಾಜು ಮಾಡದಿರುವ ಬಗ್ಗೆ

ಶ್ರೀ ಸಿ. ಎಂ. ಉದಾಸಿ.—ಹಾನಗಲ್ ತಾಲೂಕಿನಲ್ಲಿ ಕಳೆದ ಎರಡು ತಿಂಗಳಿನಿಂದ ರೈತರು ಸಾಲ ಪಡೆದು ತೆಗೆದ ೮೦ ಕೊಳವೆ ಬಾವಿಗಳಿಗೆ ವಿದ್ಯುತ್ ಪೂರೈಕೆಯಾಗದೆ ಇರುವುದು ಇಲಾಖೆಯಿಂದ ಸರಬರಾಜು ಆಗಬೇಕಾದ 'ಳ ಸಿ ಎಸ್ ಆರ್' ವಾಯಿಟ್ ಹಾಗೂ ''ರಿ.ರಿಜಿನ್ ಇನ್ಸ್‌ಲೇಟರ್'' ಸಮಯಕ್ಕೆ ಸರಿಯಾಗಿ ಸರಬರಾಜು ಮಾಡುತ್ತಿಲ್ಲವೆಂದು ಸರಕಾರದ ಗಮನದಲ್ಲಿದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಜೆ. ಎಸ್. ದೇಶ್‌ಮುಖ್.—ಆ ವಿವರಗಳು ನನ್ನ ಹತ್ತಿರ ಇಲ್ಲ. ನಾಳೆ ಅಥವಾ ನಾಡಿದ್ದು ತರಿಸಿಕೊಡುತ್ತೇನೆ.